**ದಿ: 05-04-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ.ಹೆಚ್. ವಕೀಲರಿಂದ:**

1. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೊಲದ ವಿಷಯವಾಗಿ ಬರೆದಿರುತ್ತಾರೆ. ವಾದಿ ಬಂದಮ್ಮ ನನಗೆ ದೂರದ ಸಂಬಂಧಿಕಳಾಗಬೇಕು. ಅವರು ನನ್ನ ಅತ್ತೆಯ ಮಗಳಾಗಬೇಕು. ವಾದಿ ಮತ್ತು ಅವರ ಇಬ್ಬರು ಮಕ್ಕಳು ನಗರಗುಂಡದಲ್ಲಿ ವಾಸ ಮಾಡುತ್ತಾರೆ. ನಾನು ಹುಟ್ಟಿದಾಗಿನಿಂದಲೂ ಸೋಮನಮರಡಿ ಗ್ರಾಮದಲ್ಲಿರುತ್ತೇನೆ. ಸೋಮನಮರಡಿ ಗ್ರಾಮದಲ್ಲಿ ನಮಗೆ ಹೊಲ ಮತ್ತು ಮನೆಗಳು ಇರುತ್ತವೆ. ನಾನು ನನ್ನ ಅಕ್ಕಳನ್ನು ನಗರಗುಂಡ ಗ್ರಾಮದಲ್ಲಿ ಮದುವೆ ಮಾಡಿಕೊಟ್ಟಿರುತ್ತಾರೆ. ನಾನು ತಿಂಗಳಿಗೊಮ್ಮೆ ಊರಿಗೆ ಬಂದು ಹೋಗುತ್ತೇನೆ. ನನ್ನ ಅಕ್ಕಳ ಮದುವೆಯಾಗಿ ಸುಮಾರು 30 ವರ್ಷ ಆಗಿರುತ್ತದೆ ಅವರನ್ನು ನಗರಗುಂಡ ಗ್ರಾಮದ ಮಹಿಬೂಬಸಾಬ ಅವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ.

2. ಈ ದಾವೆಯನ್ನು ವಾದಿ ಬಂದಮ್ಮ ಜುಬಲೇಸಾಬ ಇವರ ಮೇಲೆ ವಾದಿಯವರ ಹೊಲ ಪ್ರತಿವಾದಿ ಮಾಡಿಸಿಕೊಂಡಿದ್ದಾರೆ ಎಂದು ಮಾಡಿದ್ದಾರೆ. ದಾವಾ ಆಸ್ತಿಯ ಸರ್ವೆ ನಂಬರ್ 133, ವಿಸ್ತೀರ್ಣ 02 ಎಕರೆ 31 ಗುಂಟೆ ಇರುತ್ತದೆ. ಈ ಆಸ್ತಿ ಮೊದಲು ವಾದಿಯ ತಂದೆ ಇಮಾಮಸಾಬ ಇವರ ಹೆಸರಿನಲ್ಲಿರುತ್ತದೆ. ಇಮಾಮಸಾಬರವರ ಹೆಸರಲೇ ಇರುವ ಪಹಣಿಯನ್ನು ನಾನು ನೋಡಿಲ್ಲ. ಇಮಾಮಸಾಬ ಅವರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಯಾರಿಂದ ಇಮಾಮಸಾಬ ರವರಿಗೆ ಆಸ್ತಿ ಬಂದಿರುತ್ತದೆ ಎಂದು ಗೊತ್ತಿಲ್ಲ. ಸರ್ವೆ ನಂಬರ್ 133 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಾನು ದಾವಾ ಹೊಲವನ್ನು ನೋಡಿದ್ದೇನೆ. ದಾವಾ ಸರ್ವೆ ನಂಬರ್ ನಲ್ಲಿ 04 ಪಟ್ಟಿಗಳು ಉತ್ತರ ದಕ್ಷಿಣವಾಗಿ

ಇರುತ್ತವೆ. ಮೊದಲನೇ ಪಟ್ಟಿ 01 ಎಕರೆ 04 ಗುಂಟೆ ಇರುತ್ತದೆ. ಈ ಪಟ್ಟಿಯನ್ನು ಸೋಫಿಸಾಬ ರವರು ಸಾಗುವಳಿ ಮಾಡುತ್ತಾರೆ. ಎರಡನೇ ಪಟ್ಟಿ 01 ಎಕರೆ 04 ಗುಂಟೆ ಇರುತ್ತದೆ. ಇದನ್ನು ರಾಜಾಸಾಬ ರವರು ಸಾಗುವಳಿ ಮಾಡುತ್ತಾರೆ.ಮೂರನೇ ಪಟ್ಟಿ 01 ಎಕರೆ 04 ಗುಂಟೆ ಇರುತ್ತದೆ. ಈ ಪಟ್ಟಿಯನ್ನು ಯಾರು ಸಾಗುವಳಿ ಮಾಡುತ್ತಾರೆಂದು ಗೊತ್ತಿಲ್ಲ. ನಾಲ್ಕನೇ ಪಟ್ಟಿ 02 ಎಕರೆ 31 ಗುಂಟೆ ಇರುತ್ತದೆ. ಇದನ್ನು ಬಂದಮ್ಮ ಸಾಗುವಳಿ ಮಾಡುತ್ತಿದ್ದಾರೆ. ವಾದಿ ಬಂದಮ್ಮ ಸುಮಾರು 25 ವರ್ಷದಿಂದ 04 ನೇ ಪಟ್ಟಿಯನ್ನು ಸಾಗುವಳಿ ಮಾಡುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ನೀವು ಸುಮಾರು 25 ವರ್ಷದಿಂದ ವಾದಿ ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದದ್ದನ್ನು ನೋಡಿದ್ದೇನೆಮದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿ ಜುಬಲೇಸಾಬ ಇವರನ್ನು 25 ವರ್ಷದಿಂದ ನೋಡುತ್ತಿದ್ದೇನೆ. ಅವರ ಜಮೀನಿನ ಸರ್ವೆ ನಂಬರ್ ಮತ್ತು ಯಾವ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ವಾದಿಯ ತಂದೆ ಖಾಸಿಂಸಾಬ ರವರ ತಂದೆಯ ಹೆಸರು ಹುಸೇನಸಾಬ, ಹುಸೇನಸಾಬ ಇವರ ತಂದೆಯ ಹೆಸರು ಇಮಾಮಸಾಬ. ಸದರಿ ಇಮಾಮಸಾಬನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಹುಸೇನಸಾಬ ರವರ ತಂದೆಯ ಹೆಸರು ಇಮಾಮಸಾಬ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಣ್ಣ ಸೋಫಣ್ಣ ಎನ್ನುವವರು ನನಗೆ ಗೊತ್ತಿಲ್ಲ. ಸಣ್ಣ ಸೋಫಣ್ಣ ಇವರಿಗೆ 03 ಜನ ಮಕ್ಕಳು ಅವರ ಹೆಸರು ಪೀರಮೋದಿನ, ಬಡೇಸಾಬ ಮತ್ತು ಹುಸೇನಸಾಬ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪೀರಮೋದಿನರವರ ಮಗ ಸೋಫಿಸಾಬ ನನಗೆ ಗೊತ್ತಿಲ್ಲ. ಬಡೇಸಾಬ ರವರಿಗೆ ಜುಬೇಲಸಾಬ,

ಕತಲಸಾಬ, ಮತ್ತು ಕತ್ತಲಮ್ಮ ಎನ್ನುವ 03 ಜನ ಮಕ್ಕಳಿದ್ದರು ಎಂದರೆ ಸಾಕ್ಷಿಯು ಜುಬಲೇಸಾಬ ರವರು ನನಗೆ ಗೊತ್ತಿದ್ದಾರೆ ಉಳಿದವರು ನನಗೆ ಗೊತ್ತಿಲ್ಲ ಎನ್ನುತ್ತಾರೆ.

4. ಹುಸೇನಸಾಬ ರವರಿಗೆ 04 ಜನ ಮಕ್ಕಳು, 1. ಸೋಫಿಸಾಬ, 2. ಚಂದಾಸಾಬ, 3. ಅಲ್ಲಿಸಾಬ, ಮತ್ತು 4. ಖಾಸಿಂಸಾಬ ಅಂತಾ ಇರುತ್ತಾರೆ. ಹುಸೇನಸಾಬ ರವರಿಗೆ ಮಕ್ಕಳಿರಲಿಲ್ಲ ನೀವು 04 ಜನ ಮಕ್ಕಳಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಸ ನಂ 133/*/4, ವಿಸ್ತೀರ್ಣ 02 ಎಕರೆ 31 ಗುಂಟೆ ಮೊದಲು ಖಾಸಿಂಸಾಬ ಇವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಖಾಸಿಂಸಾಬ ತಂದೆ ಹುಸೇನಸಾಬ ಇವರಿಗೆ ಬಂದಮ್ಮ ಒಬ್ಬರೆ ಮಗಳು ಎಂದರೆ ಸಾಕ್ಷಿಯು ಇಲ್ಲ ಇಬ್ಬರು ಮಕ್ಕಳು ಎನ್ನುತ್ತಾರೆ. ಸ ನಂ 133/4, ವಿಸ್ತೀರ್ 02 ಎಕರೆ 31 ಗುಂಟೆ ಪ್ರತಿವಾದಿಯ ತಾತಾ ಸಣ್ಣ ಸೋಫಣ್ಣ ಇವರ ಹೆಸರಲೇ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈ ಹೊಲ ಮೊದಲು ಹಳೆ ಸ ನಂ 133/3, ವಿಸ್ತೀರ್ಣ 02 ಎಕರೆ 31 ಗುಂಟೆ, ಈಗ ಹೊಸ ನಂಬರ್ 133/4, ವಿಸ್ತೀರ್ 02 ಎಕರೆ 31 ಗುಂಟೆ ಪ್ರತಿವಾದಿ ಕುಟುಂಬಕ್ಕೆ ಸೇರಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅವರ ತಂದೆ ತೀರಿಕೊಂಡ ಮೇಲೆ ಪೀರಮೋದಿನ ಅವರಿಗೆ ಭಾಗದಲ್ಲಿ 01 ಎಕರೆ 15 ಗುಂಟೆ ಜಮೀನು ಭಾಗ ಬಂದಿದೆ ಮತ್ತು ಪ್ರತಿವಾದಿಗೆ 01 ಎಕರೆ 15 ಗುಂಟೆ ಭಾಗ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ: 19-04-2005 ರಲ್ಲಿ ಪೀರಮೋದಿನರವರು ಮತ್ತು ಬಡೇಸಾಬ ರವರು ಜಮೀನು ಹಂಚಿಕೆ ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದಿ ಬಂದಮ್ಮ ಇವರಿಗೆ ಸ ನಂ 133/*/8, ವಿಸ್ತೀರ್ಣ 02 ಎಕರೆ 08 ಗುಂಟೆ ಸಾಗುವಳಿ ಮತ್ತು ಕಬ್ಜಾದಾರರಾಗಿದ್ದಾರೆಂದರೆ ನನಗೆ ಗೊತ್ತಿಲ್ಲ. ಸ ನಂ 133/*/4, ವಿಸ್ತೀರ್ಣ 01 ಎಕರೆ 04 ಗುಂಟೆಯಲ್ಲಿ ಪ್ರತಿವಾದಿ ಸಾಗುವಳಿ ಮತ್ತು

ಕಬ್ಜಾದಾರರಾಗಿದ್ದಾರೆಂದರೆ ನನಗೆ ಗೊತ್ತಿಲ್ಲ. ಈ ರೀತಿ ಪಹಣಿ ಹಿಸ್ಸಾಗಳನ್ನು ಎಡಿಎಲ್ಆರ್ ದೇವದುರ್ಗ ರವರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ವಾದಿ ಬಂದಮ್ಮ ರವರು ಉಪವಿಭಾಗಾಧಿಕಾರಿಗಳು ರಾಯಚೂರು ಇವರಲ್ಲಿ ಮೇಲ್ಮನವಿ ಸಲ್ಲಿಸಿರುವುದು ನನಗೆ ಗೊತ್ತಿದೆ ಎನ್ನುತ್ತಾರೆ. ದಿನಾಂಕ: 16-06-2023 ರಂದು ಕಾಲಮಿತಿಯಲ್ಲಿ ಇರುವುದಿಲ್ಲ ಎಂದು ಮೇಲ್ಮನವಿಯನ್ನು ಉಪವಿಭಾಗಾಧಿಕಾರಿಗಳು ರಾಯಚೂರು ರವರು ವಜಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ ನಂ 133/4, ವಿಸ್ತೀರ್ಣ 02 ಎಕರೆ 31 ಗುಂಟೆ ಜಮೀನಿನ ಚಕ್‌ಬಂದಿ ಪೂರ್ವ ದಿಕ್ಕಿಗೆ ರಾಜಾಸಾಬ ಇವರ ಹೊಲ, ಪಶ್ಚಿಮ ದಿಕ್ಕಿಗೆ ಸೋಫಿಸಾಬ ಇವರ ಹೊಲ, ಉತ್ತರಕ್ಕೆ ಹನುಮಂತ್ರಾಯ ಇವರ ಹೊಲ, ದಕ್ಷಿಣ ದಿಕ್ಕಿಗೆ ಚಿಕ್ಕಬೂದುರು ಶಿವರಾಜಪ್ಪ ಇವರ ಹೊಲ. ಈಗ ಮೇಲೆ ಹೇಳಿದ ಚಕ್‌ಬಂದಿಯಲ್ಲಿ ಹನುಮಂತ್ರಾಯ ಮತ್ತು ರಂಗಯ್ಯ ಯಾವ ಪಟ್ಟಿಯಲ್ಲಿ ಸಾಗುವಳಿ ಮಾಡುತ್ತಾರೆ ಎಂದರೆ ಅವರು ಯಾವ ಪಟ್ಟಿಯಲ್ಲಿ ಸಾಗುವಳಿ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಶಿವರಾಜಪ್ಪನ ಹೊಲ 4 ಪಟ್ಟಿಯಲ್ಲಿ ಜಂಟಿಯಾಗಿರುತ್ತದೆ. ದಾವಾ ಸರ್ವೆ ನಂಬರ್ 133 ರ ಮೊದಲನೇ ಮತ್ತು ಎರಡನೇ ಹಾಗೂ ಮೂರನೇ ಪಟ್ಟಿಯ ಚಕ್‌ಬಂದಿ ನನಗೆ ಗೊತ್ತಿಲ್ಲ. ದಿನಾಂಕ: 30-05-2023 ರಮದು ಸಾಗುವಳಿಗೆ ಅಡ್ಡಿಪಡಿಸಿದಾಗ ನಾನು ನಮ್ಮ ಊರಿನಲ್ಲಿದ್ದೇನು. ಈ ವಿಷಯವನ್ನು ಬಂದಮ್ಮನ ಮಗ ನನಗೆ ಹೇಳಿರುತ್ತಾನೆ. ಈ ವಿಷಯವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ದಿನಾಂಕ: 05-10-1991 ರ ಮುಟೇಶನ್ ನನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿಯು 1993-94 ರ ಪಹಣಿಯನ್ನು ನಾನು ನೋಡಿರುತ್ತೇನೆ ಎನ್ನುತ್ತಾರೆ.

ವಾದಿ ನಿಮ್ಮ ಸಂಬಂಧಿಕರಾಗಿರುವುದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ